ಸವಣೂರ ತಾಲ್ಲೂಕು ಹತ್ತಿಮತ್ತೂರ ಕೆರೆ ಕಾಮಗಾರಿ ಕೆಲಸ

590 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸವಣೂರ ತಾಲ್ಲೂಕ ಹತ್ತಿಮತ್ತೂರ ಕೆರೆ ಹೂಳು ತೆಗೆಯುವ ಕೆಲಸಕ್ಕೆ 1993-94ರ ಬಜೆಟ್‌ನಲ್ಲಿ ಎಷ್ಟು ಹಣ ಇಡಲಾಗಿತ್ತು.

ಆ) ಸದರಿ ಕೆಲಸ ಎಂದು ಪ್ರಾರಂಭ ಮಾಡಲಾಗುವುದು.

ಇ) ಅದಕ್ಕೆ ತಗಲಿದ ಖರ್ಚು ಎಷ್ಟು

ಈ) ಬಾಕಿ ಉಳಿದ ಕೆಲಸ ಯಾವಾಗ ಮಾಡಲಾಯಿತು

ಉ) ಸದರಿ ಕೆರೆ ಏರಿ ಮೇಲೆ ಮಣ್ಣು ಹಾಕಿ ಸಾರ್ವಜನಿಕರ ವಾಹನಗಳಿಗೆ, ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಸದರಿ ಕೆರೆ ಕೆಲಸ ಕಳಪೆ ಕಾಮಗಾರಿಯಾಗಿದ್ದು ಸಾರ್ವಜನಿಕರ ದೂರುಗಳು ಬಂದಿರುವ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) 14.47 ಲಕ್ಷರೂ.ಗಳು

ಆ) ದಿನಾಂಕ 4.4.94 ರಂದು

ಇ) ಜುಲೈ ಅಂತ್ಯದವರೆಗೆ 11.12 ಲಕ್ಷರೂ.ಗಳು

ಈ) ಈ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿದೆ.

ಉ) ಸಾರ್ವಜನಿಕ ವಾಹನಗಳಿಗೆ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳಲಾಗಿದೆ.

ಊ) ಈ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ.

ವಿವಿಧ ಮುಜರಾಯಿ ಕಾಯ್ದೆಗಳು.

49 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಮುಂಬೈ ಕರ್ನಾಟಕ ಹೈದರಾಬಾದ್ ಕರ್ನಾಟಕ ಮದರಾಸು ಕರ್ನಾಟಕ ಹಳೇ ಮೈಸೂರು ಹಾಗೂ ಕೊಡಗು ಕರ್ನಾಟಕದಲ್ಲಿ ಜಾರಿ ಇರುವ ಮುಜರಾಯಿ ಕಾಯ್ದೆಗಳು ಯಾವುವು?

ಆ) ಇವುಗಳಿಲ್ಲವನ್ನು ಕ್ರೋಢೀಕರಿಸಿ ಒಂದೇ ಸಾಮೂಹಿಕ ಮುಜರಾಯಿ ಧಾರ್ಮಿಕ ಕಾಯ್ದೆ ಮಾಡುವಲ್ಲಿ ಸರ್ಕಾರ ವಿಫಲವಾಗಲು ಕಾರಣವೇನು ಹಾಗಿದ್ದಲ್ಲಿ ಒಂದೇ ಸಾಮೂಹಿಕ ಕಾಯ್ದೆ ಮಾಡಲು ಸರ್ಕಾರದರು ಕ್ರಮ ಕೈಗೊಳ್ಳುವರೆ ಹಾಗಿದ್ದಲ್ಲಿ ಎಂದು?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಮುಜರಾಯಿ ಸಚಿವರು)

ಅ) ಧಾರ್ಮಿಕ ದತ್ತಿ ಇಲಾಖೆಯಲ್ಲಿ ಜಾರಿಯಲ್ಲಿರುವ ಕಾಯ್ದೆಗಳು ಈ ಕೆಳಕಂಡಂತೆ ಇದೆ.

1. ಮುಂಬೈ ಕರ್ನಾಟಕ ಪ್ರಾಂತ್ಯಕ್ಕೆ ದಿ ಬಾಂಬೆ ಪಬ್ಲಿಕ್ ಆಕ್ಟ್ 1950 (ಹಳೇ ಮುಂಬೈಯಿನ 4 ಜಿಲ್ಲೆಗಳು)

2. ಹೈದರಾಬಾದ್ ಕರ್ನಾಟಕ ಪ್ರಾಂತ್ಯಕ್ಕೆ ದಿ ಹೈದರಾಬಾದ್ ಎಂಡೋಮೆಂಟ್ ರೆಗ್ಯೂಲೇಷನ್ ಫ 1349 (ಹಳೆಹೈದರಾಬಾದ್‌ನ 3 ಜಿಲ್ಲೆಗಳು)

3. ಮದರಾಸು ಕರ್ನಾಟಕ ಪ್ರಾಂತ್ಯಕ್ಕೆ ದಿ ಮದರಾಸು ಹಿಂದೂ ಮತೀಯ ಮತ್ತು ಧರ್ಮಾರ್ಥ ಉಂಬಳಿ ಕಾಯ್ದೆ 1951 (2 ಜಿಲ್ಲೆಗಳು ದಕ್ಷಿಣ ಕನ್ನಡ ಮತ್ತು ಬೆಳಗಾಂ)

4. ಕೊಡಗು ಕರ್ನಾಟಕ ಪ್ರಾಂತ್ಯಕ್ಕೆ ದಿ ಕೂರ್ಗ ಟೆಂಪಲ್ ಫಂಡ್ಸ್ ಮ್ಯಾನೇಜ್ ಮೆಂಟ್ ಆಕ್ಟ್ 1956 (ಕೊಡಗು ಜಿಲ್ಲೆ)

5. ಹಳೇ ಮೈಸೂರು ಪ್ರಾಂತ್ಯಕ್ಕೆ ಮೈಸೂರು ರಿಲಿಜಿಯನ್ ಚಾರಿಟಬಲ್ ಇನ್ಸ್ಟಿಟ್ಯೂಷನ್ ಆಕ್ಟ್ - 1927 ಹಳೇ ಮೈಸೂರಿನ 10 ಜಿಲ್ಲೆಗಳು

ವಿಫಲವಾಗಿಲ್ಲ

ವಿಕರೂಪ ಶಾಸನವನ್ನು ಅಂತಿಮ ರೂಪಗೊಂಡಿದ್ದು ಸದ್ಯದಲ್ಲಿಯೇ ಉಭಯ ಸನಗಳ ಒಪ್ಪಿಗೆಗೆ ಸಲ್ಲಿಸಲಾಗುವುದು.

ರಾಷ್ಟ್ರೀಯ ಹೆದ್ದಾರಿ ಹಾಗೂ ಅನಾಹುತಗಳು

54 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ಬೆಂಗಳೂರು-ಪೂನಾ ಹೆದ್ದಾರಿಯ ಡಾಂಬರೀಕರಣ ರಸ್ತೆಯ ಅಗಲ ಕಾರವಾರ ಮಂಗಳೂರು ಹೆದ್ದಾರಿಯ ಡಾಂಬರೀಕರಣ ರಸ್ತೆಯ ಅಗಲಕ್ಕಿಂತ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬೆಂಗಳೂರು ಪೂನಾ ಹೆದ್ದಾರಿಯ ಡಾಂಬರ್ ರಸ್ತೆ ಅಗಲವಿಲ್ಲದಿರುವುದರಿಂದ ಈ ರಸ್ತೆಯಲ್ಲಿ ಅನಾಹುತಗಳ ಸಂಖ್ಯೆ ಹೆಚ್ಚುತ್ತಿರುವುದು ನಿಜವೇ?

ಇ) ರಾಜ್ಯದಲ್ಲಿ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳೆಷ್ಟು, ಅವು ಯಾವುವು

ಈ) ಈ ರಸ್ತೆಗಳ ಹೆಸರು ಹಾಗೂ ಉದ್ದ ಎಷ್ಟು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು)

ಅ) ಇಲ್ಲ, ಈ ಎರಡೂ ಹೆದ್ದಾರಿಗಳ ಡಾಂಬರೀಕರಣದ ಅಗಲ ದ್ವಿಪಥಕ್ಕೆ ಅನುಗುಣವಾಗಿ ಏಳು ಮೀಟರ್ ಅಗಲ ಇದೆ.

ಆ) ನಿಜವಲ್ಲ

ಇ) 1. 7 ರಾಷ್ಟ್ರೀಯ ಹೆದ್ದಾರಿಗಳು
2. 78 ರಾಜ್ಯ ಹೆದ್ದಾರಿಗಳು

ಈ) ಪಟ್ಟಿ ಲಗತ್ತಿಸಿದೆ.

ಈ) ಪಟ್ಟಿ ಲಗತ್ತಿಸಿದೆ.

ಅಡಕ - 1

ಕರ್ನಾಟಕ ರಾಜ್ಯದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳ ಪಟ್ಟಿ

1.	ರಾಷ್ಟ್ರೀಯ ಹೆದ್ದಾರಿ ನಂ.4	::	ತಮಿಳುನಾಡು-ಕೋಲಾರ-ಬೆಂಗಳೂರು ಹುಬ್ಬಳ್ಳಿ-ಬೆಳಗಾಂ-ಪೂನಾ 700 ಕಿ.ಮೀ. ಬಾಂಬೆ
2.	ರಾಷ್ಟ್ರೀಯ ಹೆದ್ದಾರಿ ನಂ.4ಎ	::	ಬೆಳಗಾಂ-ಖಾನಾಪುರ-ಅನ್‌ಮೋದ್ ಪಣಜಿ 84 ಕಿ.ಮೀ
3.	ರಾಷ್ಟ್ರೀಯ ಹೆದ್ದಾರಿ ನಂ.7	::	ಬೆನಾರಸ್-ನಾಗಪುರ-ಹೈದರಾಬಾದ್-ಕರ್ನೂಲ್-ಬಾಗೇಪಲ್ಲಿ-ಬೆಂಗಳೂರು ಹೊಸೂರು-ಕೃಷ್ಣಗಿರಿ-ತಮಿಳುನಾಡು-ಕೇಪ್ ಕ್ಯಾಮರಿನ್. 128 ಕಿ.ಮೀ
4.	ರಾಷ್ಟ್ರೀಯ ಹೆದ್ದಾರಿ ನಂ.9	::	ಪೂನಾ-ಸೊಲಾಪುರ-ಹುಮ್ನಾಬಾವ್ ಹೈದರಾಬಾದ್-ವಿಜಯವಾಡ. 75 ಕಿ.ಮೀ